| ಕರ್ನಾಟಕ ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1189(1320) |
| ಸದಸ್ಯರ ಹೆಸರು | ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 16-03-2026 |
| ಉತ್ತರಿಸುವವರು | ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಅರಣ್ಯ ಪ್ರದೇಶಗಳ ವಿಸ್ತಾರ ಮತ್ತು ಅವುಗಳ ಸಂರಕ್ಷಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳಾವುವು; | ಕರ್ನಾಟಕ ಅರಣ್ಯ ಇಲಾಖೆಯ 2022-23, 2023-24 ಮತ್ತು 2024-25ರ ವಾರ್ಷಿಕ ಆಡಳಿತಾತ್ಮಕ ವರದಿಗಳನ್ವಯ ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಪ್ರದೇಶಗಳ ವಿಸ್ತಾರ ಈ ಕೆಳಗಿನಂತೆ ಇರುತ್ತದೆ. |
| ಆ) | ಅರಣ್ಯ ನಾಶವನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳಾವುವು; (ವಿವರ ನೀಡುವುದು); | |

| ವರ್ಷ | ರಾಜ್ಯದ ಅರಣ್ಯ ಪ್ರದೇಶಗಳ ವಿಸ್ತಾರ (ಚ.ಕೀ) | ಭೌಗೋಳಿಕ ಪ್ರದೇಶದ ಶೇಕಡಾವಾರು (%) |
|---|---|---|
| 2022-23 | 40,649.30 | 21.19 |
| 2023-24 | 40,678.23 | 21.21 |
| 2024-25 | 40,678.23 | 21.21 |

ಅರಣ್ಯ ಪ್ರದೇಶಗಳ ಸಂರಕ್ಷಣೆಗೆ ತೆಗೆದುಕೊಂಡ ಕ್ರಮಗಳು ಈ ಕೆಳಕಂಡಂತಿವೆ.

- ಅರಣ್ಯ ಪ್ರದೇಶದ ಗಡಿ ಬಲವರ್ಧನೆಗಾಗಿ ಗಡಿ ಜೋಡಣೆ ಕಾರ್ಯಗಳನ್ನು ಕೈಗೊಂಡು ಸ್ಥಳಕ್ಕೆ ಅನುಗುಣವಾಗಿ ಹಾಗೂ ಅನುದಾನದ ಲಭ್ಯತೆಯಂತೆ ಜಾನುವಾರು ನಿರೋಧಕ ಕಂದಕಗಳು (ಸಿ.ಪಿ.ಟಿ.), ಗಡಿಕಲ್ಲು, ಮುಳ್ಳು ತಂತಿ ಬೇಲಿ, ತಡೆಗೋಡೆ ನಿರ್ಮಾಣ ಮುಂತಾದ ಕೆಲಸಗಳನ್ನು ಕೈಗೊಳ್ಳಲಾಗುತ್ತಿದೆ.
- ಅರಣ್ಯ ಸಿಬ್ಬಂದಿಗಳು ಕಾಲಕಾಲಕ್ಕೆ ಅರಣ್ಯ ಪ್ರದೇಶದ ಗಡಿ ರಕ್ಷಣೆ ಅಲ್ಲದೇ ಅರಣ್ಯ ಮತ್ತು ವನ್ಯಜೀವಿ ಸಂಪತ್ತುಗಳ ರಕ್ಷಣೆಗಾಗಿ ಗಸ್ತು ಕಾರ್ಯ ನಿರ್ವಹಿಸುತ್ತಿರುತ್ತಾರೆ.
- ಪ್ರತಿ ಮಾಹೆಯ ದಿನಾಂಕ 03 ಮತ್ತು 18 ರಂದು ಕ್ಷೇತ್ರ ಮಟ್ಟದ ಸಿಬ್ಬಂದಿಗಳು ಅರಣ್ಯ ಗಡಿಯಲ್ಲಿ ಗಸ್ತು ತಿರುಗುವಿಕೆಯನ್ನು ಇಲಾಖೆಯ ಇ-ಪ್ರಹರಿ ತಂತ್ರಾಂಶವನ್ನು ಉಪಯೋಗಿಸಿಕೊಂಡು ಕೈಗೊಳ್ಳುತ್ತಾರೆ.
- ಅರಣ್ಯ ಒತ್ತುವರಿ ಮಾಡಿಕೊಂಡವರ ಹಾಗೂ ಅಕ್ರಮ ಮರ ಕಡಿತಲೆ / ನಾಶ ಮಾಡುವವರ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ, 1963 ಮತ್ತು ನಿಯಮಾವಳಿ, 1969 ರನ್ವಯ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.
- ಅರಣ್ಯ ಅತಿಕ್ರಮಣಗಳನ್ನು ತಾಂತ್ರಿಕ ವ್ಯವಸ್ಥೆ ಮೂಲಕ ಪತ್ತೆ ಹಚ್ಚಲು ಅರಣ್ಯ ಇಲಾಖೆಯು ಕರ್ನಾಟಕ ರಾಜ್ಯ

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ದೂರ ಸಂವೇದಿ ಅನ್ವಯಿಕ ಕೇಂದ್ರ (Karnataka State Remote Sensing Applications Centre)ದ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದ ಫಾರೆಸ್ಟ್ ಕವರ್ ಚೇಂಜ್ ಅಲರ್ಟ್ ಸಿಸ್ಟಮ್ ಎಂಬ ಆನ್‌ಲೈನ್ ವ್ಯವಸ್ಥೆಯಲ್ಲಿ ಉಪಗ್ರಹ ಚಿತ್ರಗಳ ವಿಶ್ಲೇಷಣೆಯ ಆಧಾರದ ಮೇಲೆ ಅರಣ್ಯದೊಳಗಡೆ ಹಸಿರು ಕವಚದಲ್ಲಿ, ಕ್ಷೇತ್ರ ಅಧಿಕಾರಿಗಳಿಗೆ ತಕ್ಷಣವೇ ಮೊಬೈಲ್ ಸಂದೇಶಗಳ ಮೂಲಕ ಎಚ್ಚರಿಕೆಗಳನ್ನು ನೀಡಲಾಗುತ್ತಿದೆ. ಅದರಂತೆ ಸಿಬ್ಬಂದಿಗಳು ಸಂಬಂಧಿಸಿದ ಸ್ಥಳಕ್ಕೆ ಭೇಟಿ ನೀಡಿ ವಾಸ್ತಾವಂಶಗಳನ್ನು ಖಚಿತಪಡಿಸಿ ವರದಿ ಮಾಡುತ್ತಾರೆ.<br>• ಅರಣ್ಯ ಪ್ರದೇಶಗಳಲ್ಲಿ ಕ್ಷೀಣಿತ ಭೂಮಿಗಳಲ್ಲಿ ಸ್ಥಳದ ಸೂಕ್ತತೆಯಂತೆ ಹಾಗೂ ಅನುದಾನದ ಲಭ್ಯತೆಯಂತೆ ವಿವಿಧ ಜಾತಿಗಳ ಸಸಿಗಳನ್ನು ನೆಟ್ಟು ಪೋಷಣೆ ಮಾಡಲಾಗುತ್ತಿದೆ.<br>• ಅರಣ್ಯ ಪ್ರದೇಶಗಳಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆಗಾಗಿ ವಿವಿಧ ರೀತಿಯ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.<br>• ಅರಣ್ಯ ಪ್ರದೇಶಗಳನ್ನು ಅರಣ್ಯೇತರ ಉದ್ದೇಶಕ್ಕಾಗಿ ಉಪಯೋಗಿಸಲು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅರಣ್ಯ ಮತ್ತು ವನ್ಯಜೀವಿಗಳಿಗೆ ಧಕ್ಕೆಯಾಗದಂತೆ ಖಚಿತಪಡಿಸಿದ ನಂತರ ಮಾತ್ರ ಸೂಕ್ತ ನಿರ್ಣಯಕ್ಕಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ.<br>• ಅರಣ್ಯ ಪ್ರದೇಶಗಳಲ್ಲಿನ ಸಂಪತ್ತಿನ ಕಳ್ಳಸಾಗಣಿಕೆಯನ್ನು ತಡೆಗಟ್ಟಲು ವಿವಿಧ ರಸ್ತೆಗಳಲ್ಲಿ ಅರಣ್ಯ ತನಿಖಾ ಠಾಣೆಗಳನ್ನು ಸ್ಥಾಪಿಸಲಾಗಿರುತ್ತವೆ.<br>• ಅರಣ್ಯ ರಕ್ಷಣೆಗೆ ತೊಡಗಿದ ಕ್ಷೇತ್ರಾಧಿಕಾರಿ/ಸಿಬ್ಬಂದಿಗಳಿಗೆ ಅಗತ್ಯತೆಯಂತೆ ಸರ್ಕಾರಿ ವಾಹನ, ನಿಸ್ತಂತು ಉಪಕರಣಗಳ ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸಲಾಗುತ್ತಿದೆ.<br>• ಅರಣ್ಯ ಪ್ರದೇಶವನ್ನು ಕಾಡ್ಗಿಚ್ಚಿನಿಂದ ಸಂರಕ್ಷಣೆಗೆ ಅನುದಾನದ ಲಭ್ಯತೆಯ ಮೇರೆಗೆ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>  • ಕಾಡ್ಗಿಚ್ಚಿನ ಋತುಮಾನವು ಪ್ರಾರಂಭವಾಗುವ ಸಮಯದಲ್ಲಿ ಸೂಕ್ಷ್ಮ ಅರಣ್ಯ ಪ್ರದೇಶಗಳಲ್ಲಿ ನಿಯಂತ್ರಿತ ಬೆಂಕಿ (Controlled Burning) ಮೂಲಕ ಮುಂದಿನ ದಿನಗಳಲ್ಲಿ ಸಂಭವಿಸಬಹುದಾದ ಕಾಡ್ಗಿಚ್ಚು ತೀವ್ರತೆಯನ್ನು ಕಡಿಮೆಗೊಳಿಸುವುದು;<br>  • ಸೂಕ್ಷ್ಮ ಅರಣ್ಯ ಪ್ರದೇಶಗಳಲ್ಲಿ ಬೆಂಕಿ ರೇಖೆಗಳನ್ನು ನಿರ್ಮಾಣ ಹಾಗೂ ನಿರ್ವಹಣೆ ಮಾಡುವುದು; |

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| | | • ಬೇಸಿಗೆ ಕಾಲದಲ್ಲಿ ಅಗತ್ಯತೆಯಂತೆ ಜನವರಿ ಮಾಹೆಯಿಂದ ಮೇ ಮಾಹೆಯವರೆಗೆ ಸ್ಥಳೀಯರನ್ನು ಬೆಂಕಿ ಕಾವಲುಗಾರರನ್ನಾಗಿ ನಿಯೋಜಿಸಿ ಕಾಡ್ಗಿಚ್ಚನ್ನು ತಡೆಗಟ್ಟುವುದು ಹಾಗೂ ನಂದಿಸುವುದು;<br>• ಅರಣ್ಯದ ಅಂಚಿನ ಪ್ರದೇಶಗಳಲ್ಲಿರುವ ಗ್ರಾಮಗಳಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಕಾಡ್ಗಿಚ್ಚು ಬೀಳದಂತೆ ತಡೆಗಟ್ಟಲು ತಿಳುವಳಿಕೆ ನೀಡುವುದು;<br>• ಅರಣ್ಯ ಪ್ರದೇಶಗಳಲ್ಲಿ ಕಾಡ್ಗಿಚ್ಚಿನ ನಿಯಂತ್ರಣಕ್ಕೆ ಅಗತ್ಯವಿರುವ ನೀರಿನ ಲಭ್ಯತೆ ಇರುವ ಸ್ಥಳಗಳನ್ನು ಗುರುತಿಸಿಕೊಳ್ಳುವುದು;<br>• ಅರಣ್ಯ ಪ್ರದೇಶಗಳಲ್ಲಿ ಅಗತ್ಯತೆಯಂತೆ ಸೂಕ್ತ ಸ್ಥಳಗಳಲ್ಲಿ Watch Towers ಗಳ ಮೂಲಕ ಕಾಡ್ಗಿಚ್ಚು ಬೀಳುವ ಸ್ಥಳಗಳಲ್ಲಿ ವೀಕ್ಷಿಸಿ ಸಂಬಂಧಿಸಿದ ಸಿಬ್ಬಂದಿಗಳಿಗೆ ಸಂದೇಶದ ಮೂಲಕ ಎಚ್ಚರಿಸುವುದು;<br>• ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಹಾಗೂ ಆರೋಗ್ಯ ಇಲಾಖೆಯ ಸಹಕಾರದೊಂದಿಗೆ ಅರಣ್ಯ ಇಲಾಖೆಯ ಮುಂಚೂಣಿ ಸಿಬ್ಬಂದಿಗಳಿಗೆ ತರಬೇತಿಯನ್ನು ಏರ್ಪಡಿಸುವುದು;<br>• ಕಾಡ್ಗಿಚ್ಚು ನಿಯಂತ್ರಣಕ್ಕಾಗಿ ಸಂಬಂಧಿಸಿದ ಇಲಾಖೆಗಳು, ಗ್ರಾಮ ಅರಣ್ಯ ಸಮಿತಿಗಳು (Village Forest Committees/Eco- Development Committeeಗಳು, ಸ್ಥಳೀಯ ಸಂಘ-ಸಂಸ್ಥೆಗಳು ಮತ್ತು ಇತರರ ಸಹಯೋಗ ಪಡೆದುಕೊಳ್ಳಲು ಕಾರ್ಯಕ್ರಮ/ ಕಾರ್ಯಗಾರಗಳನ್ನು ಆಯೋಜಿಸುವುದು;<br>• ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ಸಂಸ್ಥೆಯ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದ Geospatial Information Portal ನ ಮೂಲಕ Satellite Imageryಯ ಆಧಾರದ ಮೇಲೆ ಸಂಪೂರ್ಣ ಸ್ವಯಂಚಾಲಿತ ಅರಣ್ಯ ಬೆಂಕಿ ಸಂದೇಶ (Forest Fire Alerts) ಗಳನ್ನು ಆಯಾ ಸಿಬ್ಬಂದಿಯ ಮೊಬೈಲ್ ಫೋನಿಗೆ ಕಳುಹಿಸಲಾಗುತ್ತಿದ್ದು, ಸಿಬ್ಬಂದಿಗಳು ಬೆಂಕಿ ಬಿದ್ದ ಕ್ಷೇತ್ರಕ್ಕೆ ಭೇಟಿ ನೀಡಿ ಕಾಡ್ಗಿಚ್ಚನ್ನು ನಂದಿಸಿ, ಛಾಯಾಚಿತ್ರವನ್ನು ಸದರಿ ಪೋರ್ಟಲ್ ಮೂಲಕ ಕ್ರಮ ಕೈಗೊಂಡ ವರದಿಯನ್ನು ಸಲ್ಲಿಸುತ್ತಾರೆ.<br>• ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ಸಂಸ್ಥೆಯ ಸಹಯೋಗದೊಂದಿಗೆ ಅರಣ್ಯ ಇಲಾಖೆಯ ಕೇಂದ್ರ ಸ್ಥಾನದಲ್ಲಿ 24X7 ಕಾಡ್ಗಿಚ್ಚು ಉಸ್ತುವಾರಿ ಕೋಶ (Forest Fire Monitoring |

Bhade

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| | | Cell) ದ ತಂಡವು ಎಲ್ಲಾ ಅರಣ್ಯ ಬೆಂಕಿ ಸಂದೇಶ (Forest Fire Alerts) ಗಳಿಗೆ ಹಾಗೂ ಅರಣ್ಯ ಇಲಾಖೆಯ ಸಹಾಯವಾಣಿ (Forest Helpline) 1926 ರ ಮೂಲಕ ಸಾರ್ವಜನಿಕರಿಂದ ಸ್ವೀಕರಿಸಿದ ಬೆಂಕಿ ಸಂದೇಶಗಳನ್ನು ಸದರಿ ಪೋರ್ಟಲ್ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ.<br>• ಕಾಡ್ಗಿಚ್ಚು ನಿಯಂತ್ರಣಕ್ಕಾಗಿ ಬೆಂಕಿಯನ್ನು ನಂದಿಸಲು ಹಾಗೂ ಮರ/ವನಸ್ಪತಿ ಗುಂಪುಗಳನ್ನು ಕಡಿದು ಬೆಂಕಿಯ ಹರಡುವಿಕೆಯನ್ನು ತಡೆಯಲು ಉಪಯೋಗಿಸಬಹುದಾದ ವಿವಿಧ ರೀತಿಯ ಉಪಕರಣಗಳನ್ನು (ಉದಾಹರಣೆಗಾಗಿ: Blower, Water Sprayer, Brush Cutter, Fire Beater) ಹಾಗೂ ಬೆಂಕಿ ನಿಯಂತ್ರಣಕ್ಕಾಗಿ ನಿಯೋಜಿಸಿರುವ ಸಿಬ್ಬಂದಿಗಳಿಗೆ Water Bottles, Shoes, Gloves, Binoculars, Torch, ಮುಂತಾದವುಗಳನ್ನು ಒದಗಿಸಲಾಗುತ್ತಿದೆ. |
| ಇ | ಅರಣ್ಯ ನಾಶಕ್ಕೆ ಕಾರಣವಾಗುತ್ತಿರುವ ಪ್ರಮುಖ ಅಂಶಗಳಾವುವು? | ಅರಣ್ಯ ನಾಶಕ್ಕೆ ಕಾರಣವಾಗುತ್ತಿರುವ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.<br>• ಅರಣ್ಯ ಭೂಮಿಯ ಅತಿಕ್ರಮಣ;<br>• ಅರಣ್ಯ ಭೂಮಿಯನ್ನು ಕಂದಾಯ ಭೂಮಿ ಎಂದು ಭಾವಿಸಿ ಜನರಿಗೆ ಅರಣ್ಯ ಭೂಮಿ ಮಂಜೂರಾತಿ;<br>• ಜನವಸತಿ ವಿಸ್ತಾರ ಹಾಗೂ ಅದಕ್ಕಾಗಿ ಬೇಕಾಗಿರುವ ವಿವಿಧ ರೀತಿಯ ಅಭಿವೃದ್ಧಿ ಕಾಮಗಾರಿಗಳ ಕಾರಣ ಅರಣ್ಯ ಪ್ರದೇಶದ ಕ್ರಮೇಣ ವಿಘಟನೆ (forest fragmentation). |

**ಕಡತ ಸಂಖ್ಯೆ: ಅಪಜೀ 58 ಎಫ್ಎಎಫ್ 2026**

Bebadl

**(ಈಶ್ವರ ಬಿ. ಖಂಡ್ರೆ)**

ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ

ಸಚಿವರು